(SRI KADIDAL MANJAPPA.)

the Rural Development Commissioner that the Panchayet will contribute Rs. 200 for maintenance only and the entire cost of the scheme etc., will have to be borne by Government.

ಶ್ರೀ ಆರ್. ಮುನಿಸ್ವಾಮಯ್ಯ.—ಈಗ ನುಂಕದ ಕಟ್ಟೆಯ ಹತ್ತಿರ ನೀರು ಸರಬರಾಯಿ ಇಲಾಖೆಯ ಸಿಬ್ಬಂದಿಗಾಗಿ ಒಂದು ನಲ್ಲಿ ಇದೆಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಆರ್. ಮುನಿಸ್ವಾಮಯ್ಯ.—ಈಗಿರತಕ್ಕ ನಲ್ಲಿಯನ್ನೇ ಇನ್ನೂ ಸ್ವಲ್ಪ ಮುಂದಕ್ಕೆ ಹಾಕಿದರೆ ಆ ಹಳ್ಳಿಯವರಿಗೆ ಅನುಕೂಲವಾಗುತ್ತದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಪರಿಶೀಲನೆ ಮಾಡುತ್ತೇವೆ.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗೆ ಮಾಡುವುದರಿಂದ 25 ಸಾವಿರ ರೂಪಾಯಿ ಉಳಿತಾಯ ವಾಗುವುದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಒಟ್ಟು ಯೋಜನೆಗೆ ; ಇದೊಂದಕ್ಕೇ ಅಲ್ಲವೆಂದು ತಿಳಿಸಿದ್ದೇನೆ.

Utility of Sri E. V. Seshadri, B. E., in the Road Transport Department.

Q.—307. Sri B. M. SEENAPPA (Cubbonpet).—

Will the Government be pleased to state :—

(*a*) whether Sri E. V. Seshadri, B.E., is an employee as a Technical Assistant in the Government Road Transport Co. ;

(*b*) whether it is true that the Government had sanctioned him scholarship for his higher studies in America in Chemical Engineering;

(*c*) whether they would utilise his services either in the Belagola Factory Works or other Government Chemical Industries ?

A.—Sri KADIDAL MANJAPPA (Minister for Revenue and Public Works).—

(*a*) Yes.
(*b*) Yes.
(*c*) This is a matter of opinion.

ಶ್ರೀ ಬಿ. ಎಂ. ಶೀನಪ್ಪ.—ಇವರನ್ನು ಅಮೆರಿಕಾದಲ್ಲಿ ಶಿಕ್ಷಣ ಪಡೆಯಲು ಕಳುಹಿಸುವುದಕ್ಕೆ ಸರ್ಕಾರದಿಂದ ಎಷ್ಟು ಹಣ ಖರ್ಚಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಬಿ. ಎಂ. ಶೀನಪ್ಪ.—ಇವರು ಅಮೆರಿಕಾಕ್ಕೆ ಹೋಗಿ ಬಂದ ಮೇಲೆ ಇವರನ್ನು ಯಾವ ಕೆಲಸಕ್ಕೆ ನೇಮಕಮಾಡಿದಿರಿ ?

Sri KADIDAL MANJAPPA.—I cannot readily give that information now.

ಶ್ರೀ ಬಿ. ಎಂ. ಶೀನಪ್ಪ.—ಅವರು ಅಮೆರಿಕಾಕ್ಕೆ ಹೋಗಿ ವಾಪಸು ಬಂದ ತಕ್ಷಣ ಯಾವ ಕೆಲಸಕ್ಕೆ ತೆಗೆದುಕೊಂಡಿರಿ ಎಂಬುದು ನನ್ನ ಪ್ರಶ್ನೆ.

Sri KADIDAL MANJAPPA.—Notice. Sir, the Hon'ble Member is asking me to furnish the history of the officer, I am not in a position to give it.

ಶ್ರೀ ಬಿ. ಎಂ. ಶೀನಪ್ಪ.—ರೋಡ್ ಟ್ರಾನ್ಸ್‌ಪೋರ್ಟ್‌ಗೆ ಬರುವುದಕ್ಕೆ ಮೊದಲು ಅವರ ಸಂಬಳ ಎನಿತ್ತು ?

ಅಧ್ಯಕ್ಷರು.—ಏನಾಗಬೇಕೆಂದು ನೇರವಾಗಿ ಪ್ರಶ್ನೆ ಕೇಳಬಹುದು.

ಶ್ರೀ ಬಿ. ಎಂ. ಶೀನಪ್ಪ.—ನನ್ನ ಅಭಿಪ್ರಾಯ ವಿಷ್ಟೆ : ಇವರು ಕೆಮಿಕಲ್ ಇಂಜಿನಿಯರಿಂಗ್‌ನಲ್ಲಿ ಶಿಕ್ಷಣ ಪಡೆದು ಬಂದಿದ್ದಾರೆ ; ಇದಕ್ಕಾಗಿ ಸರ್ಕಾರಕ್ಕೆ ಸಾವಿರಾರು ರೂಪಾಯಿ ಖರ್ಚಾಗಿದೆ ; ರೋಡ್ ಟ್ರಾನ್ಸ್‌ಪೋರ್ಟ್‌ನಲ್ಲಿ ಇವರನ್ನು ನೇಮಿಸಿದ್ದಾರೆ ; ಕೆಮಿಕಲ್ ಇಂಜಿನಿಯರಿಂಗಿಗೂ ರೋಡ್ ಟ್ರಾನ್ಸ್‌ಪೋರ್ಟಿಗೂ ಏನು ಸಂಬಂಧವಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಅಮೆರಿಕದಲ್ಲಿ ಇವರು ಮೆಕ್ಯಾನಿಕಲ್ ಇಂಜಿನಿಯರಿಂಗ್ ಮೇಜರ್ ಮತ್ತು ಕೆಮಿಕಲ್ ಇಂಜಿನಿಯರಿಂಗ್ ಮೈನರ್ ಆಗಿ ತೆಗೆದುಕೊಂಡು, ಎರಡನ್ನೂ ಪಾಸುಮಾಡಿಕೊಂಡು ಬಂದಿದ್ದಾರೆ ; ರೋಡ್ ಟ್ರಾನ್ಸ್‌ಪೋರ್ಟಿನ ಜನರಲ್ ಮ್ಯಾನೇಜರು ಇವರು ಅಲ್ಲಿರುವುದು ಅನುಕೂಲವೆಂದು ಹೇಳುತ್ತಿದ್ದಾರೆ.

Construction of a feeder channel from the Jayamangali River to Thogarighatta and Chikkanahalli Tanks, Koratagere Taluk.

Q.—321. Sri MUDDURAMIAH (Koratagere-Madhugiri).—

Will the Government be pleased to state :—

(*a*) whether a representation was made to them requesting for the construction of a feeder channel for the supply of water from the Jayamangali River to Thogarighatta and Chikkanahalli Tanks in Koratagere Taluk ;

(*b*) the amount estimated ?

A.—Sri KADIDAL MANJAPPA (Minister for Revenue and Public Works).—

(*a*) Yes.

(*b*) About Rupees one lakh (in the year 1949).

ಶ್ರೀ ಮುದ್ದುರಾಮಯ್ಯ.—ಅಂದಾಜು ತಯಾರಾಗಿ ಐದು ವರ್ಷವಾಗಿದೆ, ಮುಂಜೂರಾಗಲು ನಿಧಾನವಾಗುವುದಕ್ಕೆ ಕಾರಣವೇನು ?